ನಿತ್ಯ ಪಠನೆಗೆ

ಸಂಕ್ಷಿಪ್ತ

ಶ್ರೀ ಗುರು ಚರಿತ್ರೆ

ಪ್ರಕಟಣೆ

ದತ್ತಾತ್ರೇಯ ದೇವಸ್ಥಾನಂ ಟ್ರಸ್ಟ್

59, 3ನೇ ಬ್ಲಾಕ್, ತ್ಯಾಗರಾಜನಗರ, ಬೆಂಗಳೂರು – 28 ದೂರವಾಣಿ : 2676 9210

ಸಂಕ್ಷಿಪ್ತ ಶ್ರೀಗುರುಚರಿತ್ರೆ
ಲೇಖಕರು : ದಿ॥ ಅಂಗಾಭಟ್ಟ ನೀಲಕಂಠಭಟ್ಟ ಪೂಜಾರ್
ಬಂಕಾಪುರ - ಹಾವೇರಿ ಜಿಲ್ಲೆ

ಪ್ರಕಟಣೆ
ಪೂಜಾರ್ ಸಹೋದರರು
ಲೇಬರ್ ಕಾಲೋನಿ, ದಾವಣಗೆರೆ, ಜೆ.ಪಿ. ನಗರ, ಬೆಂಗಳೂರು

ಪ್ರಕಟಣೆ ಸಹಾಯ
ಸ್ಪಿನ್ ಟೆಕ್ನಾಲಜೀಸ್
www.spin.co.in

॥ ಶ್ರೀ ॥

ಸಂಕ್ಷಿಪ್ತ ಶ್ರೀಗುರುಚರಿತ್ರೆ

ಸರಸ್ವತಿ ಗಂಗಾಧರ ಗುರುಭಕ್ತನಿಗೊಲಿದು ಬಂದನಾ ಶ್ರೀದತ್ತ ।
ಪರಿಪರಿತಾಪವ ಕ್ಲೇಶವ ಕಳೆಯುತ ನಿಜಸುಖವಿತ್ತನು ಶ್ರೀದತ್ತ ॥೧॥

ಕಷ್ಟದಿಂದ ಕಂಗೆಡುವ ಬಾಲಕನ ಕಂಡ ಸಿದ್ಧಮುನಿ ಶ್ರೀದತ್ತ ।
ದುಷ್ಟ ಭಾವನೆಯ ಬಿಟ್ಟು ಭಜಿಸಿದರೆ ಕೊಟ್ಟು ಕಾಯುವನು ಶ್ರೀದತ್ತ ॥೨॥

ನಿಂತು ನುಡಿವ ಯೋಗೀಂದ್ರಸಂಪ್ರಿಯನು ಪಿಡಿದು ಕೇಳಿದ ಶ್ರೀದತ್ತ ।
ಇಂತು ಕರುಣೆಯದು ಕೊನೆಗೆ ಬಂದಿತೇ ಪಾಲಿಸು ಪಾಲಿಸು ಶ್ರೀದತ್ತ ॥೩॥

ಆಲಿಸು ಕುವರನೆ ಶ್ರೀಗುರುಚರಿತ್ರೆಯ ಭವತಾರಕನವ ಶ್ರೀದತ್ತ ।
ತೋರುವ ಎಲ್ಲವ ಹಸಿವನು ಹಿಂಗಿಸಿ ಹರುಷದಿ ಕಾಯುವ ಶ್ರೀದತ್ತ ॥೪॥

ಇವನೇ ದತ್ತನು ಅನಸೂಯಾತ್ಮಜ ವಿಶ್ವನಿಯಾಮಕ ಶ್ರೀದತ್ತ ।
ಭವತಿಯ ನೆವದಲಿ ವಿಪ್ರನ ಮಡದಿಗೆ ಸುತನಾದನು ತಾ ಶ್ರೀದತ್ತ ॥೫॥

ಶ್ರೀಪಾದ ಶ್ರೀವಲ್ಲಭ ನಾಮದಿ ಕುಲ ಉದ್ಧರಿಸಿದ ಶ್ರೀದತ್ತ ।
ಕಾಪಿಡೆ ನಡೆದನು ಭಾರತ ಜನವನು ಯಾತ್ರೆಯ ನೆವದಿಂ ಶ್ರೀದತ್ತ ॥೬॥

ತೀರ್ಥಕ್ಷೇತ್ರಗಳ ಸುತ್ತಿ ಪತಿತರನು ಪಾವನಗೊಳಿಸಿದ ಶ್ರೀದತ್ತ ।
ಸಾರ್ಥವಾದ ಗೋಕರ್ಣವ ನೋಡುತ ಕುರವದಿ ನಿಂತನು ಶ್ರೀದತ್ತ ॥೭॥

ಮಂದಮತಿ ಅಂಬಾಕುಮಾರನಿಗೆ ಜ್ಞಾನದಾತನು ಶ್ರೀದತ್ತ ।
ಮಂದವಾಸರದ ಪ್ರದೋಷ ಪೂಜೆಯ ಮಹಿಮೆಯ ಹೇಳಿದ ಶ್ರೀದತ್ತ ॥೮॥

ಅಗಸಗೆ ಮುಂದಣ ಜನುಮದಿ ರಾಜ್ಯದ ಭೋಗವನಿತ್ತನು ಶ್ರೀದತ್ತ ।
ಅಗಲದಂತಿರಲು ವಲ್ಲಭೇಶನ ಸಂಕಟ ಕಳೆದನು ಶ್ರೀದತ್ತ ॥೯॥

ವಚನದಂತೆ ಅಂಬಾ ಮಾಧವರಿಗೆ ಬಾಲಕನಾದನು ಶ್ರೀದತ್ತ ।
ಉಚಿತಸಮಯ ಬರೆ ನಾಲ್ಕೂ ವೇದದ ಸಾರವ ಹೇಳಿದ ಶ್ರೀದತ್ತ ॥೧೦॥

ಅವಳೀತನಯರ ತಾಯಿಗೆ ಕರುಣಿಸಿ ಕಾಶಿಗೆ ಬಂದನು ಶ್ರೀದತ್ತ ।
ನವಸಂವತ್ಸರವಿರೆ ಸನ್ಯಾಸವ ಸ್ವೀಕರಿಸಿದನು ಶ್ರೀದತ್ತ ॥೧೧॥

ಮೂವತ್ತಬ್ಧವ ದಾಟಿಬಂದು ತಾಯ್ತಂದೆಯ ನೋಡಿದ ಶ್ರೀದತ್ತ ।
ಆವುದನೆಲ್ಲವ ನೀಡಿ ಹರಸುತ ಪಯಣವ ಬೆಳೆಸಿದ ಶ್ರೀದತ್ತ ॥೧೨॥

ಉದರಶೂಲೆಯ ವಿಪ್ರನ ಜನ್ಮವನುಳಿಸಿ ಕಾಯ್ದನು ಶ್ರೀದತ್ತ ।
ಮುದದಿ ಪೂಜಿಸುವ ಸತಿಪತಿಯರನು ಕಂಡು ನಲಿದನು ಶ್ರೀದತ್ತ ॥೧೩॥

ಸಾಯನದೇವನ ಸಾವನು ತಪ್ಪಿಸಿ ಯವನನಂಜಿಸಿದ ಶ್ರೀದತ್ತ ।
ಧ್ಯೇಯ ಸಾಧನೆಗೆ ಯಾತ್ರೆಯ ಮಾಡಲು ಶಿಷ್ಯರ ಕಳುಹಿದ ಶ್ರೀದತ್ತ ॥೧೪॥

ಗುಪ್ತವಾಗಿರಲು ಗುರುನಿಂದಕನಿಗೆ ಬೋಧವ ಮಾಡಿದ ಶ್ರೀದತ್ತ ।
ಸುಪ್ತ ಚೇತನೆಯ ಚಾಲಿಪ ಶಕ್ತಿಯು ಗುರುವಿಗಿದೆಂದನು ಶ್ರೀದತ್ತ ॥೧೫॥

ದೇವಿಯ ಬಳಿಯಲಿ ನಾಲಿಗೆ ಕೊಯ್ದಗೆ ಮತಿಯ ಪಾಲಿಸಿದ ಶ್ರೀದತ್ತ ।
ಭಾವದಿ ಭಿಕ್ಷೆಯ ನೀಡಿದ ವಿಪ್ರಗೆ ಸಂಚಿತ ತೋರಿದ ಶ್ರೀದತ್ತ ॥೧೬॥

ಯೋಗಿನಿಯರ ಸಹವಾಸದಿ ಇರುವನು ನರಸಿಂಹ ಸರಸ್ವತಿ ಶ್ರೀದತ್ತ ।
ಸಾಗಿ ಶೋಧಿಸಿದ ಅಂಬಿಗರವನಿಗೆ ಗುಪಿತವ ಹೇಳಿದ ಶ್ರೀದತ್ತ ॥೧೭॥

ಹರಕೆಯ ಕುವರನ ಹರಣವ ಬರೆಸಿದ ಔದುಂಬರದಿ ಶ್ರೀದತ್ತ ।
ಬರುತ ಅಮರಜಾ ಭೀಮಾ ಸಂಗಮ ಕ್ಷೇತ್ರದಿ ತಂಗಿದ ಶ್ರೀದತ್ತ ॥೧೮॥

ಬರಡೆಮ್ಮೆಯನು ಕರೆಯಿಸಿ ಜನರಿಗೆ ಕೌತುಕ ತೋರಿದ ಶ್ರೀದತ್ತ ।
ಹರುಷದಿ ಕರೆಯಲು ಗಾಣಗಾಪುರಕೆ ನೆಲೆಸಬಂದನಾ ಶ್ರೀದತ್ತ ॥೧೯॥

ದೂರಮಾಡಿದ ಬ್ರಹ್ಮ ರಾಕ್ಷಸನ ಕುಮಸಿಗೆ ನಡೆದನು ಶ್ರೀದತ್ತ ।
ತೋರಿದ ತ್ರಿವಿಕ್ರಮ ಭಾರತಿಗೆ ವಿಶ್ವರೂಪವನು ಶ್ರೀದತ್ತ ॥೨೦॥

ವಾದಿಸಬಂದಿಹ ಸೊಕ್ಕಿದ ವಿಪ್ರರ ಗರ್ವವ ಕಳೆದನು ಶ್ರೀದತ್ತ ।
ವೇದದಸಾರ ನಿರೂಪಣ ಮಾಡುತ ಅದ್ಭುತ ಹೇಳಿದ ಶ್ರೀದತ್ತ ॥೨೧॥

ತಿಳಿಯದ ವಿಪ್ರರು ವಾದವ ಬೆಳೆಸಲು ಹೊಲೆಯನ ಕರೆದನು ಶ್ರೀದತ್ತ ।
ಬಳಿದು ಭಸ್ಮವ ಕೃಪೆಯನು ಮಾಡುತ ವಾದಿಸ ಹೇಳಿದ ಶ್ರೀದತ್ತ ॥೨೨॥

ಪಾಪಿಗಳಾಗಲೇ ಅಂಜಿ ನಡುಗಿದರು ಶಾಪವ ಕೊಟ್ಟನು ಶ್ರೀದತ್ತ ।
ಪಾಪ ಪುಣ್ಯದ ಸಂಚಿತ ಕರ್ಮದ ಫಲವನುಸುರಿದ ಶ್ರೀದತ್ತ ॥೨೩॥

ಭಸ್ಮ ಮಹಾತ್ಮೆಯ ತಿಳಿಹೇಳಿದನು ವಾಮದೇವನು ಶ್ರೀದತ್ತ ।
ವಿಸ್ಮಯಗೊಂಡಿಹ ರಾಕ್ಷಸ ಜನುಮಕೆ ಮೋಕ್ಷವನಿತ್ತನು ಶ್ರೀದತ್ತ ॥೨೪॥

ಸತಿಸಾವಿತ್ರಿಯ ಪತಿ ಮೃತನಾಗಲು ಅಳುವುದ ಕಂಡನು ಶ್ರೀದತ್ತ ।
ಸತಿಧರ್ಮದ ಇತಿಹಾಸವ ಹೇಳುತ ಸತಿ ಹೋಗೆಂದನು ಶ್ರೀದತ್ತ ॥೨೫॥

ಹೋಗುವ ಮುನ್ನ ಕ್ಷೇತ್ರಕೆ ಬಂದ ಬಾಲೆಯ ಹರಸಿದ ಶ್ರೀದತ್ತ ।
ಹೋಗದು ಜೀವ ಎನ್ನಯ ನುಡಿಯಿದು ಮಂಗಳವೆಂದನು ಶ್ರೀದತ್ತ ॥೨೬॥

ಚೇತರಿಸಿತು ಶವ ಅಭಿಷಿತ ಜಲದಿಂ ಪ್ರೋಕ್ಷಣೆ ಮಾಡಲು ಶ್ರೀದತ್ತ ।
ಆತುರದಿಂ ದಂಪತಿಗಳು ಬಾಗಲು ಆಶೀರ್ವದಿಸಿದ ಶ್ರೀದತ್ತ ॥೨೭॥

ರುದ್ರಾಧ್ಯಾಯದ ರುದ್ರಾಕ್ಷಿಯ ಕಥೆ ಹೇಳಿದನವರಿಗೆ ಶ್ರೀದತ್ತ ।
ಭದ್ರೆ ಸಿಮಂತಿನಿ ಮಾಡಿದ ಚಂದಿರವಾರದ ವ್ರತವನು ಶ್ರೀದತ್ತ ॥೨೮॥

ಬೆಳಗಿನಿಂದಲಿ ರಾತ್ರಿಯವರೆಗಿನ ವಿಹಿತಕರ್ಮವನು ಶ್ರೀದತ್ತ ।
ತಿಳಿಯಪಡಿಸಿದ ವಿಪ್ರನ ಮಡದಿಗೆ ಪರಾನ್ನದೋಷವ ಶ್ರೀದತ್ತ ॥೨೯॥

ಮೂವರ ಭೋಜನ ಅಕ್ಷಯವಾಗಿಸಿ ದಾಸಗೊಲಿದನು ಶ್ರೀದತ್ತ ।
ಸಾವ ಸಮೀಪದ ಗಂಗಾಮಾತೆಗೆ ಮಕ್ಕಳಕೊಟ್ಟನು ಶ್ರೀದತ್ತ ॥೩೦॥

ಒಣಮರ ಚಿಗುರಿಸಿ ನರಹರಿ ವಿಪ್ರನ ಕುಷ್ಠವ ಕಳೆದನು ಶ್ರೀದತ್ತ ।
ಅಣುಕದಿ ಅಂಜಿಕೆ ತೋರುತ ಶಿಷ್ಯನ ಪರೀಕ್ಷೆ ಮಾಡಿದ ಶ್ರೀದತ್ತ ॥೩೧॥

ಕಾಶೀಕ್ಷೇತ್ರದ ಮಹಿಮೆಯ ತೋರಿದ ಸಾಯನದೇವಗೆ ಶ್ರೀದತ್ತ ।
ತೋಷದಲವನು ಹಾಡುತಲೆಂದನು ಹರಿಹರ ಬ್ರಹ್ಮನು ಶ್ರೀದತ್ತ ॥೩೨॥

ಅನಂತನಾವ್ರತ ಮಹಿಮೆಯ ಹೇಳುತ ವ್ರತ ಮಾಡಿಸಿದನು ಶ್ರೀದತ್ತ ।
ಅನಂತಕೋಟಿಯು ಅನಂತರೂಪನು ಅನಂತಮಹಿಮನು ಶ್ರೀದತ್ತ ॥೩೩॥

ನೇಕಾರಗೆ ಶ್ರೀಶೈಲದ ಯಾತ್ರೆಯ ಮಾಡಿಸಿದನು ತಾ ಶ್ರೀದತ್ತ ।
ಸಾಕಾರದಿ ಶಿವರಾತ್ರಿ ಮಹಾತ್ಮೆಯ ಹೇಳಿದನಾತಗೆ ಶ್ರೀದತ್ತ ॥೩೪॥

ದೇವಿಯ ಭಕ್ತನ ಕುಷ್ಠ ನಿವಾರಿಸಿ ಜ್ಞಾನವಕೊಟ್ಟನು ಶ್ರೀದತ್ತ ।
ಕವಿಯಾದಾ ಕಲ್ಲೇಶನರ್ಚಕನ ಶಿಷ್ಯನ ಮಾಡಿದ ಶ್ರೀದತ್ತ ॥೩೫॥

ಹಸುಳರೆಲ್ಲರನು ಮೆಚ್ಚಿಸಿ ಧರಿಸಿದ ಎಂಟು ರೂಪವನು ಶ್ರೀದತ್ತ ।
ಕೃಷಿಕನ ಮೌನಾರ್ಚನೆಗೊಲಿದಿತ್ತನು ನೂರ್ಮಡಿ ಧಾನ್ಯವ ಶ್ರೀದತ್ತ ॥೩೬॥

ಪುರಜನರಿಂ ಸಹ ಸಕಲ ತೀರ್ಥಗಳ ಯಾತ್ರೆಯ ಮಾಡಿದ ಶ್ರೀದತ್ತ ।
ಪೂರ್ವಾಶ್ರಮದ ಭಗಿನಿಯ ಪಾಪಕ್ಷಾಲನೆ ಮಾಡಿದ ಶ್ರೀದತ್ತ ॥೩೭॥

ಹರುಷದಿ ಹೇಳಿದ ಗುರುಗೀತೆಯನು ನಾಮಧಾರಕಗೆ ಶ್ರೀದತ್ತ ।
ನೆರೆ ನಂಬುವರನು ಪರಿಪಾಲಿಸುವುದು ನಿಶ್ಚಿತವೆಂದನು ಶ್ರೀದತ್ತ ॥೩೮॥

ಯಾಕೋ ರಜಕಾ ಎನ್ನುತ ಯವನರ ರಾಜನ ಕರೆದನು ಶ್ರೀದತ್ತ ।
ಕಾಕುಗೊಂಡಿಹ ರಾಜನ ಮಂಡಿಯ ರೋಗವ ಕಳೆದನು ಶ್ರೀದತ್ತ ॥೩೯॥

ಯವನರ ಕಾಟಕೆ ಕದಳೀವನಕೆ ಹೋಗುವೆನೆಂದನು ಶ್ರೀದತ್ತ ।
ಅವಸರದಿಂ ಬಲು ಶೋಕಿಸಬೇಡಿರಿ ಇಲ್ಲಿಹೆನೆಂದನು ಶ್ರೀದತ್ತ ॥೪೦॥

ಹಾಡಿರಿ ಹಾಡಿರಿ ಮತ್ತು ಆರತಿ ಮಾಡಿರಿ ಎಂದನು ಶ್ರೀದತ್ತ ।
ಬೇಡಿದ ಕೊಡುವೆನು ಭಾವುಕ ಜನರಿಗೆ ಸತ್ಯವು ಎಂದನು ಶ್ರೀದತ್ತ ॥೪೧॥

ಅತಿ ಸಂಕ್ಷೇಪದ ಈ ಗುರುಚರಿತೆಯ ದಿನವೂ ಹಾಡುವ ಕೇಳ್ವರಿಗೆ ।
ಅತಿ ಆನಂದವು ಮೋಕ್ಷ ಸುಖಸಂಪದ ಪಾಲಿಸುವನು ತಾ ಶ್ರೀದತ್ತ ॥೪೨॥

ಮಂದಮತಿಯು ನಾ ತೊದಲ್ನುಡಿಯಿಂದಲಿ ಹಾಡಿದೆನಿದನು ಶ್ರೀದತ್ತ ।
ವಂದಿಸುತಲಿ ನಾ ಅರ್ಪಣ ಮಾಡುವೆ ನಿನ್ನಡಿಗಳಿಗೆ ಶ್ರೀದತ್ತ ॥೪೩॥

ಮಂಗಳ ಮಂಗಳ ನಿತ್ಯಸುಮಂಗಳ ಮಂಗಳಮಯನು ಶ್ರೀದತ್ತ ।
ಗಂಗೆಮಾಳಾಂಬಿಕೆಕಾಂತಸ್ವರೂಪನು ಸಚ್ಚಿದಾನಂದಮಯ ಶ್ರೀದತ್ತ ॥೪೪॥

॥ ಸಿದ್ಧಾಂತ ಅವಧೂತ ಚಿಂತನ ಶ್ರೀ ಗುರುದೇವದತ್ತ ॥
॥ ಶ್ರೀ ಕೃಷ್ಣಾರ್ಪಣಮಸ್ತು ॥

ದತ್ತ ಮಹಿಮೆ

ಎಲ್ಲ ಮಾತಿಗಿಂತ ಇದು ಹೆಚ್ಚಿನ ಮಾತೆಂದು 'ದತ್ತಾ' ಎನು ಮನವೇ

ಎಲ್ಲ ದೇವರಗಿಂತ ಇವನೆ ಹೆಚ್ಚಿನವನೆಂದು 'ದತ್ತಾ' ಎನು ಮನವೇ

ಹತ್ತು ಮಾತಿನವಳಿಗೆ ಇದುವಂದು ಮಾತೆಂದು 'ದತ್ತಾ' ಎನು ಮನವೇ

ಮಾತು ಮಾತಿಗೆ ಒಮ್ಮೆ ಹರಟೆಗೆ ತಕ್ಕಂತೆ 'ದತ್ತಾ' ಎನು ಮನವೇ

ಮನಸಿನ ಕಲ್ಮಷವ ಕಸವ ಗುಡಿಸುವಾಗ 'ದತ್ತಾ' ಎನು ಮನವೇ

ಮನಸಿನ ಚಿಂತೆಗಳು ದೂರವಾಗುವ ಹಾಗೆ 'ದತ್ತಾ' ಎನು ಮನವೇ

ದತ್ತ ಭಕ್ತರನ್ನೆಲ್ಲ ಹೊತ್ತು ಕಾಯುವ ನಾಮ 'ದತ್ತಾ' ಎನು ಮನವೇ

ನಿತ್ಯ ತೃಪ್ತನು ಇವನಿಚ್ಛಿನಿವನ ಭಜಿಸುತ್ತ 'ದತ್ತಾ' ಎನು ಮನವೇ

'ದತ್ತ' ನಾಮ ಮಹಿಮೆ

'ದತ್ತ' ನಾಮೋಚ್ಚರಣೆ ಭವ ಕತ್ತಲೆಗೆ ಸೂರ್ಯಪ್ರಕಾಶವು
'ದತ್ತ' ನಾಮವು ಭೂತಪಿಶಾಚಿಗಳ ಉಚ್ಚಾಟನೆಯ ಮಂತ್ರ
'ದತ್ತ' ಎಂಬೆರಡಕ್ಷರಂಗಳು ಕತ್ತರಿಯು ಸಂಸಾರ ಪಾಶಕೆ ।
ಉತ್ತಮೋತ್ತಮ ವೃದ್ಧಿಬೀಜವು 'ದತ್ತ' ನಾಮವಿದು ॥
'ದತ್ತ' ನಾಮವ ಹಾಡು ಜಿಹ್ವೆಯೆ
'ದತ್ತ' ಮೂರ್ತಿಯ ನೋಡು ನೇತ್ರವೆ
'ದತ್ತ' ನಾಮಕೆ ಬಾಗಿ ವಂದಿಸು ಶಿರದಿ ಭಕ್ತಿಯಲಿ
'ದತ್ತ' ಭಜನೆಯ ಕೇಳು ಕರ್ಣವೆ
'ದತ್ತ' ಮೂರ್ತಿಗೆ ನಮಿಸು ಕರಗಳೆ
'ದತ್ತ' ಸೇವಾಸಕ್ತಿಯಲ್ಲಿಯೆ ಜನ್ಮ ಸಾರ್ಥಕವು ॥

॥ ಶ್ರೀ ॥

ಯಾರು ಈ ಗುರುಚರಿತ್ರೆಯನ್ನು ಪ್ರತಿದಿನವೂ

ಶ್ರವಣ ಮಾಡುತ್ತಾರೋ ಅಥವಾ ಪಠಣ ಮಾಡುತ್ತಾರೋ

ಅವರ ಸಮಸ್ತ ದುಃಖವೂ ಗುರುಕೃಪೆಯಿಂದ

ನಾಶಹೊಂದುವಂಥದ್ದಾಗಿ ಸುಖದಿಂದ

ಇರುವಂಥವರಾಗುತ್ತಾರೆಂಬುದರಲ್ಲಿ ಸಂಶಯವಿಲ್ಲ.

ಶ್ರೀ ದತ್ತನನ್ನು ಕಾಣಲು ದಾರಿದೀಪವಾಗಿರುವ ಭಕ್ತರ ನಿಧಿ ಶ್ರೀ ಗುರು ಶಂಕರಾರ್ಯ ಚಿದಾನಂದರ
ದಿವ್ಯ ಪಾದಾರವಿಂದಗಳಿಗೆ ನಮೋ ನಮೋ

ದಿಗಂಬರ ದಿಗಂಬರ ಶ್ರೀಪಾದ ವಲ್ಲಭ ದಿಗಂಬರ